ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 78/2025**

ಪ್ರ.ವ.ಬೋ.ತಾಃ 31-10-2025

ಚಾಸಾಃ 2 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಗಫೂರ್ ಸಾಬ್ |
| ತಂದೆ/ಗಂಡನ ಹೆಸರು | ಬಾಷಾ ಸಾಬ್ |
| ವಯಸ್ಸು | 42 ವರ್ಷ |
| ವೃತ್ತಿ | ಆಟೋ ಚಾಲಕ |
| ವಾಸ | ಬೆಲ್ಲದಮಡಗು, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು ಆರೋಪಿಯನ್ನು ನೋಡಿರುವುದಿಲ್ಲ. ಚಾಸಾ.1 ಮತ್ತು 3 ರವರ ಪರಿಚಯ ಇದ್ದು ನಾನು ಅವರ ಮನೆಯಲ್ಲಿ ಬಾಡಿಗೆಗೆ ನಮ್ಮ ಕುಟುಂಬದ ಜೊತೆ ವಾಸವಾಗಿರುತ್ತೇನೆ. ಕಳೆದ 6 ರಿಂದ 7 ತಿಂಗಳುಗಳ ಹಿಂದೆ ನನ್ನ ಮಕ್ಕಳುಗಳಿಗೆ ಶಾಲೆಗೆ ರಜೆ ಇದ್ದ ಕಾರಣ ಬೆಲ್ಲದಮಡಗು ಗ್ರಾಮಕ್ಕೆ ಹೋಗಿದ್ದೆವು. ಅಲ್ಲಿ ಸುಮಾರು 5 ದಿನಗಳ ಕಾಲ ಇದ್ದೆವು. ಆ ಸಮಯದಲ್ಲಿ ನಮ್ಮ ಮನೆಯ ಬೀಗ ಹಾಕಿ ಹೋಗಿದ್ದೆವು. ಆನಂತರ ನಾವು ನಮ್ಮ ಊರಿನಿಂದ ವಾಪಸ್ಸು ಮನೆಗೆ ಬಂದು ನೋಡಲಾಗಿ ನಮ್ಮ ಮನೆಯ ಗೇಟಿನ ಬೀಗ ಹಾಕಿತ್ತು. ನಾವು ಒಳಗೆ ಹೋಗಿ ನೋಡಲಾಗಿ ನಮ್ಮ ಮನೆಯ ಬಾಗಿಲನ್ನು ಹೊಡೆದು ಹಾಕಿ, ಮನೆಯ ಒಳಗಡೆ ಇರುವ ಬೀರುವಿನಲ್ಲಿ ಇದ್ದ ಬಟ್ಟೆ ಹೊರಗಡೆ ಚೆಲ್ಲಾಡಿದ್ದವು. ಅಲ್ಲದೇ ನಮ್ಮ ಮನೆಯ ಬೀರುವಿನಲ್ಲಿದ್ದ 7 ಗ್ರಾಂ ತೂಕದ ಬಂಗಾರದ ಉಂಗುರ ಕಳುವಾಗಿತ್ತು. ನಂತರ

ಚಾಸಾ.1 ರವರಿಗೆ ಫೋನ್ ಮೂಲಕ ಈ ವಿಚಾರವನ್ನು ತಿಳಿಸಿದೆನು. ಆಗ ಚಾಸಾ.1 ರವರು ಅವರ ಮನೆಯ ಬಳಿ ಹೋಗಿ ನೋಡುವಂತೆ ಫೋನ್ ಮೂಲಕ ತಿಳಿಸಿದರು. ಅದರಂತೆ ತಕ್ಷಣ ನಾನು ಚಾಸಾ.1 ರವರ ಮನೆಯ ಬಳಿ ಹೋಗಿ ನೋಡಲಾಗಿ ಅವರ ಮನೆಯ ಬಾಗಿಲ ಬೀಗವನ್ನು ಹೊಡೆದು ಹಾಕಿದ್ದು, ಒಳಗಡೆ ಹೋಗಿ ನೋಡಲಾಗಿ ಬೀರುವಿನಲ್ಲಿ ಇದ್ದ ಬಟ್ಟೆ ಚೆಲ್ಲಾಡಿದ್ದವು. ಅವರ ಮನೆಯಲ್ಲಿದ್ದ ಒಡವೆಗಳೂ ಸಹ ಕಳ್ಳತನವಾಗಿದ್ದವು. ನಂತರ ಚಾಸಾ.1 ರವರು ಸ್ಥಳಕ್ಕೆ ಬಂದರು. ಅವರ ಮನೆಯಲ್ಲಿ ಬಂಗಾರದ ಒಡವೆಗಳು ಕಳ್ಳತನವಾಗಿದ್ದ ಕಾರಣ ಪೊಲೀಸರಿಗೆ ದೂರು ನೀಡಿದರು.

ಅದೇ ದಿನ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸಂಜೆ 4.00 ರಿಂದ 5.00 ಗಂಟೆಯವರೆಗೆ ನನ್ನ, ಚಾಸಾ.5 ಮತ್ತು 6 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಈಗ ತೋರುತ್ತಿರುವ ಫೋಟೋದಲ್ಲಿರುವ ವ್ಯಕ್ತಿ ನಾನೇ ಆಗಿರುತ್ತೇನೆ. ಆ ಫೋಟೋಗಳನ್ನು ಈಗ ನೋಡುತ್ತಿದ್ದು ನಿಪಿ.3 ರಿಂದ 6 ಎಂದು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿಃ 13.05.2025 ರಂದು ಪೊಲೀಸರು ನಮಗೆ ಆರೋಪಿಯನ್ನು ತೋರಿಸಿದರು ಎಂದರೆ ಸರಿ. ಆರೋಪಿಯು ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದ ಉಂಗುರವನ್ನು ತನಗೆ ಉಷಾರಿಲ್ಲ ಎಂದು ಹೇಳಿ ಯಾರೋ ವ್ಯಕ್ತಿಗಳಿಗೆ ಮಾರಾಟ ಮಾಡಿ ತನ್ನ ದುಶ್ಚಟಗಳಿಗೆ ಬಳಸಿಕೊಂಡಿದ್ದಾರೆ ಎಂದು ಪೊಲೀಸರು ನನಗೆ ತಿಳಿಸಿದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ನನಗೆ ಪೊಲೀಸರು ತೋರಿಸಿದ ವ್ಯಕ್ತಿ ಆಗಿರುತ್ತಾರೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಎಂ.ಎಂ. ವಕೀಲರಿಂದಃ–**

ಆರೋಪಿಯನ್ನು ಇದೇ ದಿನ ಮೊದಲು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು, ಈ ಹಿಂದೆಯೂ ಸಹ ನೋಡಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿದರು ಎಂಬುದು ನನಗೆ ಖಚಿತವಾಗಿ ಗೊತ್ತಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿ 7 ಗ್ರಾಂ ತೂಕದ ಬಂಗಾರದ ಉಂಗುರ ಕಳ್ಳತನವಾದ ಬಗ್ಗೆ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾರು ನಮ್ಮ ಮನೆಯ ಬಾಗಿಲನ್ನು ಮುರಿದು ಹಾಕಿ ಬೀರುವಿನಲ್ಲಿದ್ದ ಬಟ್ಟೆಗಳನ್ನು ಚೆಲ್ಲಾ ಪಿಲ್ಲಿ ಮಾಡಿ ಬಂಗಾರದ ಉಂಗುರವನ್ನು ಕಳ್ಳತನ ಮಾಡಿದರು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ನಮ್ಮ ಮನೆಯ ಹತ್ತಿರ ಏನು ಬರೆದುಕೊಂಡರು ಎಂಬುದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಹಾಕಿರುತ್ತೇನೆ. ಪೊಲೀಸರು ನಾನು ನೀಡಿದ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ಸಾಕ್ಷಿದಾರರನ್ನು ಯಾರು ಕರೆಸಿದರು ಎಂಬುದು ನನಗೆ

ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಮನೆಯಲ್ಲಾಗಲೀ ಅಥವಾ ಚಾಸಾ.1 ರವರ ಮನೆಯಲ್ಲಾಗಲೀ ಯಾವುದೇ ಕಳ್ಳತನ ಮಾಡಿಲ್ಲ, ಪೊಲೀಸರು ಇದೇ ವ್ಯಕ್ತಿ ಕಳ್ಳತನ ಮಾಡಿದ್ದಾನೆ ಎಂದು ತೋರಿಸಿದ ಮೇರೆಗೆ ಆರೋಪಿಯನ್ನು ನೋಡಿದ್ದೇನೆ ಎಂದರೆ ಸರಿ. ನಾನು 7 ಗ್ರಾಂ ಬಂಗಾರದ ಉಂಗುರವನ್ನು ಖರೀದಿಸಿದ ಬಗ್ಗೆ ರಶೀದಿಯನ್ನು ಪೊಲೀಸರಿಗೆ ತೋರಿಸಿದ್ದು, ಅದನ್ನು ಅವರು ಪಡೆದುಕೊಂಡಿರುವುದಿಲ್ಲ. ಆ ದಿನ ಆರೋಪಿ ನಮ್ಮ ಮನೆಯಲ್ಲಾಗಲೀ ಅಥವಾ ಚಾಸಾ.1 ರವರ ಮನೆಯಲ್ಲಾಗಲೀ ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಮ್ಮ ಹಾಗೂ ಚಾಸಾ.1 ರವರ ಮನೆಯಲ್ಲಿ ಯಾವುದೇ ಕಳ್ಳತನ ಆಗದೇ ಇದ್ದರೂ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆ ದಿನ ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ, ಠಾಣೆಯಲ್ಲಿಯೇ ಸೃಷ್ಟಿಸಿಕೊಂಡು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಹಾಗೂ ಚಾಸಾ.1 ರವರ ಮನೆಯಿಂದ ಯಾವುದೇ ಒಡವೆಗಳನ್ನು ಕಳ್ಳತನ ಮಾಡಿರುವುದಿಲ್ಲ ಮತ್ತು ಅವುಗಳನ್ನು ತನ್ನ ದುಶ್ಚಟಕ್ಕೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್

C.C.78/2025
P.W.3

ಮತ್ತು ಜೆಎಂಎಫ್‌ಸಿ, ಮಧುಗಿರಿ